



ಸ್ಥಾಪಿಸಲಾಗಿದೆ. ನಂತರದ ಪಾವಟಿಕೆಗಳು, ಎಂಟು ಸೈಪ್ರಸ್ ವೃಕ್ಷದ ಕಂಬಗಳ ಆಧಾರದ ಮೇಲೆ ನಿರ್ಮಿಸಿರುವ, ಮತ್ತೊಂದು ಎರಡಂತಸ್ತಿನ ಕಟ್ಟಡ ಸೈ–ಮೊನ್‌ಗೆ ಕರೆದೊಯ್ಯುತ್ತವೆ.

ಮೋಮೊಯಾಮ ಯುಗದ ವಾಸ್ತು ಶೈಲಿಯಲ್ಲಿರುವ ಇದನ್ನು ನಿರ್ಮಿಸಿದ್ದು 1607ರಲ್ಲಿ. ಸೈ–ಮೊನ್‌ನ ವಾಮ ಪಾರ್ಶ್ವಕ್ಕಿರುವ ಶೋರೊ ಅಥವ ಘಂಟಾ ಗೋಪುರದ ನಿರ್ಮಾಣ ವರ್ಷ 1596. ಆದರೆ ಇದರೊಳಗೆ ಅಳವಡಿಸಿರುವ ಘಂಟೆಯನ್ನು 1478ರಲ್ಲೇ ಎರಕ ಹೊಯ್ದು ಸಿದ್ಧಗೊಳಿಸಲಾಗಿತ್ತು. ಈ ಗೋಪುರವನ್ನು 1999ರಲ್ಲಿ ನವೀಕರಣ ಮಾಡಲಾಯಿತು. ಹಿಂದೆ ಭಿಕ್ಷುಗಳ ಮಾರ್ಗದರ್ಶನಕ್ಕಾಗಿ ಘಂಟಾನಾದ ಮಾಡುತ್ತಿದ್ದರಂತೆ. ಈಗ ಹೊಸ ಸಂವತ್ಸರದ ಮುನ್ನಾ ದಿನ 108 ಬಾರಿ ಈ ಘಂಟೆಯ ನಿನಾದ ಮೊಳಗುತ್ತದೆ. ಬೌದ್ಧ ಧರ್ಮದಲ್ಲಿ ಉಲ್ಲೇಖಗೊಂಡಿರುವ ನೂರೆಂಟು ಲೌಕಿಕ ಕಾಮನೆಗಳನ್ನು ಬದಿಗೊತ್ತಬೇಕೆಂದು ಈ ನಿನಾದ ಎಚ್ಚರಿಸುತ್ತದೆ ಎಂಬ ನಂಬಿಕೆಯಿದೆ.

ಸೈ–ಮೊನ್‌ನ ಪೂರ್ವ ದಿಕ್ಕಿನಲ್ಲಿರುವ ಸಾಂಜು ನೋ ತೊ 31 ಮೀಟರ್ ಎತ್ತರವಿದ್ದು ಜಪಾನಿನಲ್ಲಿರುವ ಮೂರಂತಸ್ತಿನ ಪಗೋಡಗಳಲ್ಲಿ ಅತ್ಯಂತ ಎತ್ತರದ್ದೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಸಪೂರ ಮತ್ತು ನೀಳ ಆಕಾರದ ಈ ಪಗೋಡ ದೂರದಿಂದಲೇ ಆಕರ್ಷಿಸುತ್ತದೆ. ಹತ್ತಿರ ಹೋದಂತೆ ಕಂಡು ಬರುವ ಮೋಹಕ ಕುಸುರಿ ಅಲಂಕಾರದಿಂದ ಪಗೋಡ ಮತ್ತಷ್ಟು ಮನಸೂರೆಗೊಳ್ಳುತ್ತದೆ. ಈ ಪಗೋಡದ ಹಿಂಬದಿಯಲ್ಲಿ ಬೌದ್ಧ ಗ್ರಂಥಗಳನ್ನು ಒಳಗೊಂಡ ಕ್ಯೋಡೊ, ಸ್ಥಾಪಕರ ಪಡಸಾಲೆ ಕೈಸನ್–ಡೊ, ಕೇಂದ್ರ ದ್ವಾರ ಟೊಡೊರೋಕಿ–ಮೊನ್ ಇತ್ಯಾದಿಗಳಿವೆ.

ಕಿಯೋಮಿಝು–ದೇರದ ಪ್ರಮುಖ ಆಕರ್ಷಣೆ ಬುಟಾಯ್ ಅಥವ ಮರದ ವೇದಿಕೆ. ಹನ್ನೆರಡು ಅಡಿ ಎತ್ತರದ 168 ಮರದ ಕಂಬಗಳ ಮೇಲೆ 410 ಸೈಪ್ರಸ್ ಹಲಗೆಗಳನ್ನು ಮೊಳೆಗಳ ನೆರವಿಲ್ಲದೆ ಜೋಡಿಸಿರುವುದು ಇದರ ವಿಶೇಷ. ಎಲ್ಲ ಋತುಗಳಲ್ಲೂ ಇಲ್ಲಿಂದ ಕಾಣಸಿಗುವ ವೈವಿಧ್ಯಮಯ ಪ್ರಕೃತಿಯ ಮತ್ತು ಕ್ಯೋಟೋ ನಗರದ ಸುಂದರ ದೃಶ್ಯಗಳನ್ನು ಕಣ್ತುಂಬಿಸಿಕೊಳ್ಳಲು ಪ್ರವಾಸಿಗರು ಇಲ್ಲಿಗೆ ಧಾವಿಸುತ್ತಾರೆ. ಮುಖ್ಯ ಹಜಾರದಲ್ಲಿ ಹನ್ನೊಂದು ಮುಖಗಳು ಮತ್ತು ಸಹಸ್ರ ಹಸ್ತಗಳ ಪುಟ್ಟ ಕನ್ನೋನ್ ವಿಗ್ರಹವಿದೆ. ಈ ದೇವತೆ ದಯಾಮಯಿ ಮತ್ತು ಕರುಣಾಮಯಿ ಎಂಬುದು ಜನರ ನಂಬಿಕೆ.

ಜಿಷು ದೇವಾಲಯ ಪ್ರೇಮ ದೇವತೆಗೆ ಮೀಸಲಾಗಿದೆ. ಮಂದಿರದ ಮುಂಭಾಗದಲ್ಲಿ 18 ಮೀಟರುಗಳ ಅಂತರದಲ್ಲಿ ಎರಡು ಶಿಲೆಗಳನ್ನು ಇರಿಸಲಾಗಿದೆ. ಕಣ್ಣು ಮುಚ್ಚಿಕೊಂಡು ಶಿಲೆಗಳ ನಡುವೆ ನಡೆದರೆ ಪ್ರೇಮ ಯಶಸ್ವಿಯಾಗುವುದೆಂಬ ನಂಬಿಕೆಯಿದೆ.

ಪ್ರಧಾನ ಮಂದಿರಕ್ಕೆ ಮುನ್ನ ಇರುವ ಝುಯಿಗು–ಡೊ ಹಾಲ್‌ನಲ್ಲಿರುವ ತೈನ್ನೈ ಮೆಗುರಿ ಹೆಸರಿನ ಗಾಢಾಂಧಕಾರದ ಸುರಂಗದಲ್ಲಿ ಸಾಗಿ ಒಂದು ವಿಶಿಷ್ಟ ಅನುಭವ ಪಡೆಯಬಹುದು. ಅಂಧಕಾರದಲ್ಲಿ ಸಾಗಿ ಬೆಳಕಿಗೆ ಬರುವುದು ಸ್ತ್ರೀ ಬೋಧಿಸತ್ವನ ಗರ್ಭ ಪ್ರವೇಶಿಸಿ ಪುನರ್ಜನ್ಮ ಪಡೆಯುವುದರ ಸಂಕೇತವೆಂದು ನಂಬಲಾಗಿದೆ. ಸಾವಿರ ದೇಗುಲಗಳ ನಗರ ಕ್ಯೋಟೋದಲ್ಲಿರುವ ಕಿಯೋಮಿಝು–ದೇರ 1994ರಲ್ಲಿ ಯುನೆಸ್ಕೋ ವಿಶ್ವ ಪರಂಪರೆಯ ತಾಣಗಳ ಪಟ್ಟಿಗೆ ಸೇರ್ಪಡೆಯಾಗಿದೆ.